**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,</u>**
**<u>ಕೆ.ಜಿ.ಎಫ್,</u>**
**<u>ಸಿ.ಸಿ. ಸಂಖ್ಯೆ: 460/2022</u>**

**ಸಿ.ಡಬ್ಲೂ:1 /ಪಿ.ಡಬ್ಲೂ: 2**
**ಪ್ರಮಾಣೀಕರಿಸಿದ ದಿನಾಂಕ: 05-07-2025**

**<u>ಮುಂದುವರೆದ ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-</u>**

1. 1 ಮತ್ತು 2 ಆರೋಪಿತರು ಗೈರು ಹಾಜರು ಆರೋಪಿ ಪರ ವಕೀಲರು ಆರೋಪಿತರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳುತ್ತಾರೆ.

**<u>ಪಾಟೀ ಸವಾಲು:-ಆರೋಪಿತರ ಪರ ಶ್ರೀ ಹೆಚ್ ಸಿ ಎಸ್ ವಕೀಲರಿಂದ:-</u>**

**2.** ನಾನು 1, 2 ಮತ್ತು ಮೃತ 3 ನೇ ಆರೋಪಿತರನ್ನು ನಾನು ಹೇಳಿದಂತೆ ಸದರಿ ಘಟನೆಗಿಂತ ಮೊದಲು ನೋಡಿರುವುದಿಲ್ಲ. ಸದರಿ ಆರೋಪಿತರ ವಿರುದ್ಧ ನಮ್ಮ ಠಾಣೆಯಲ್ಲಿ ಯಾವುದಾದರೂ ಪ್ರಕರಣ ದಾಖಲಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಆರೋಪಿತರು ಕ್ಯಾಸಂಬಹಳ್ಳಿ ಕ್ರಾಸ್ ನಿಂದ ಬಸವನಗುಡಿಗೆ ಹೋಗುತ್ತಿದ್ದರು. ಆ ದಿನ ನಾವು ಪೋಲೀಸರು 5 ಮಂದಿ ಇದ್ದೆವು. ಆ ದಿನ ಸಾರ್ವಜನಿಕರು ಸುಮಾರು 4-5 ಜನ ಇದ್ದರು. ಆ ದಿನ ನಾನು ಆರೋಪಿತರನ್ನು ಸುಮಾರು 50 ಮೀ ಅಂತರದಿಂದ ನೋಡಿರುತ್ತೇನೆ ಅವರು ಎಷ್ಟು ಸ್ಪೀಡ್ ನಲ್ಲಿ ಗಾಡಿಯಲ್ಲಿ ಬರುತ್ತಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನಮ್ಮ ಠಾಣೆ ಇಂದ ನಾವು ಆ ದಿನ ಗಸ್ತು ಮಾಡುತ್ತಿದ್ದ ಸ್ಥಳಕ್ಕೂ ಸುಮಾರು 20 ಮೀ ಅಂತರ ಇತ್ತು.

3. 2021 ನೇ ಸಾಲಿನಲ್ಲಿ ನಮ್ಮ ಕ್ಯಾಸಂಬಹಳ್ಳಿ ಠಾಣೆಯ ಮುಂಬಾಗ ರಸ್ತೆಯಲ್ಲಿ ಗುಂಡಿಗಳು ಇದ್ದವು ಎಂದರೆ ಸರಿಯಲ್ಲ. ನಮ್ಮ ಠಾಣೆಯ ಮುಂಬಾಗ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿರುತ್ತೇವೆ ಎಂದರೆ ಸರಿ. ಸದರಿ ಕ್ಯಾಸಂಬಹಳ್ಳಿ ಪೋಲೀಸ್ ಠಾಣೆ ಇರುವ ಕಾರಣ ಸಾರ್ವಜನಿಕರು ತಮ್ಮ ವಾಹನಗಳನ್ನು ನಿದಾನವಾಗಿ ಚಾಲನೆ ಮಾಡಿಕೊಂಡು ಬರುತ್ತಾರೆ ಎದ್ದರೆ ಹೌದು ಆದರೆ ಆರೋಪಿತರು ಆ ದಿನ ವೇಗವಾಗಿ ಬಂದಿರುತ್ತಾರೆ ಎನ್ನುತ್ತಾರೆ. ಆ ದಿನ ನಾವು ರಸ್ತೆಯ ಬಲಭಾಗದಲ್ಲಿ ಕರ್ತವ್ಯದಲ್ಲಿ ಇದ್ದೆವು. ಆ ದಿನ ಆರೋಪಿತರು ಮೊದಲು ಎಡಭಾಗದಲ್ಲಿ ತಮ್ಮ ವಾಹನದಲ್ಲಿ ಬರುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಎಡಭಾಗದಲ್ಲಿ ನಮ್ಮ ಸಹೋದ್ಯೋಗಿಗಳು ಇದ್ದ ಕಾರಣ ನಂತರ ಅವರು ಬಲಬಾಗಕ್ಕೆ ಬಂದಿರುತ್ತಾರೆ ಎನ್ನುತ್ತಾರೆ.

4. ಆ ದಿನ ಆರೋಪಿತರು ನನಗೆ ಡಿಕ್ಕಿ ಪಡಿಸಿದ ಪರಿಣಾಮ ನಾನು ಹಿಂದಕ್ಕೆ ಬಿದ್ದಿರುತ್ತೇನೆ. ಆ ದಿನ ನಾನು ಹೇಳಿದಂತೆ ಆರೋಪಿತರ ಯಾವುದೇ ಕೃತ್ಯದಿಂದ ನನಗೆ ಗಾಯ ಉಂಟಾಗಿಲ್ಲ ಮತ್ತು ಅದಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಕ್ಯಾಸಂಬಹಳ್ಳಿ ಸರ್ಕಾರಿ ಪ್ರಾಥಮಿಕ ಆಸ್ಪತ್ರೆ ಇದೆ ಎಂದರೆ ಸರಿ. ಸದರಿ ಕ್ಯಾಸಂಬಹಳ್ಳಿ ಸರ್ಕಾರಿ ಪ್ರಾಥಮಿಕ ಆಸ್ಪತ್ರೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಬೆಳಗ್ಗೆ ಇರುತ್ತಾರೆ ಎನ್ನುತ್ತಾರೆ. ಸದರಿ ಘಟನೆಯು ಬೆಳಗ್ಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಮಧ್ಯಾಹ್ನ ಆಗಿರುತ್ತದೆ ಎನ್ನುತ್ತಾರೆ. ಆ ಸಮಯದಲ್ಲಿ ನನಗೆ ನಿಜವಾಗಿಯು ಗಾಯವಾಗಿದ್ದರೆ ಕ್ಯಾಸಂಬಹಳ್ಳಿ ಪ್ರಾಥಮಿಕ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಬಹುದಿತ್ತು

ಎಂದರೆ ಸಾಕ್ಷಿಯು ನನ್ನ ಕಾಲಿಗೆ ಫ್ರಾಕ್ಚರ್ ಆಗಿದೆ ಎಂದು ನನಗೆ ಅನಿಸಿದ ಕಾರಣ ಮತ್ತು ಅಲ್ಲಿ ಉತ್ತಮ ವೈದ್ಯರು ಇಲ್ಲದೇ ಇರುವ ಕಾರಣ ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿಃ ಹೇಳಿದ ಘಟನೆ ಸುಳ್ಳಾಗಿದ್ದು ನನ್ನ ಮೇಲಾದಿಕಾರಿಯವರು ಹೇಳಿದಂತೆ ಅಂಕಿ ಅಂಶಗಳಿಗೋಸ್ಕರ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**